ಉಪಾಧ್ಯಕ್ಷರು : ಮುಗಿಯಿತೇ ನಿಮ್ಮದು? ಈಗ ನೀವು ಹೇಳಿದ್ದೆಲ್ಲಾ ಗೊತ್ತಾಯಿತು. ಲಾ ಮಿನಿಸ್ಟರ್ ಏನೋ ಹೇಳುತ್ತಾರೆ, ಕೇಳಿ.

ಶ್ರೀ ಆರಗ ಜ್ಞಾನೇಂದ್ರ : ನಾನು ಸರ್ಕಾರ ಏನು ಮಾಡಿದೆ ಅದನ್ನು ಅಪ್ರೀಷಿಯೇಟ್ ಮಾಡಿದ್ದೇನೆ. ಆ ಮಗುವಿಗೆ ಹೋಗಿ ಕೊಟ್ಟಂತಹ ನೆರವು, ಆ ಮಗುವನ್ನು ನಮ್ಮ ರಾಜ್ಯದಲ್ಲಿ ನೋಡಿಕೊಂಡಿರತಕ್ಕಂಥ ರೀತಿಯ ಬಗ್ಗೆ, ಮಾಧ್ಯಮಗಳ ಬಗ್ಗೆ ಸದಭಿಪ್ರಾಯವನ್ನು ಸೂಚಿಸಿ, ಆ ನಾರಾಯಣನ ಬಗ್ಗೆ ಈ ರೀತಿ ಮಾಡಬೇಕು ಎನ್ನುವ ಒಂದು ಇರಾದೆಯೇ ಹೊರತು ಬೇರೆ ಏನೂ ಇಲ್ಲ. ಒಂದು XXX ದಿಂದ ಒಂದು ಮಗು ಬಂದರೂ ಕೂಡ ಇಷ್ಟೊಂದು ಹೃದಯವಂತಿಕೆಯನ್ನು ನಮ್ಮ ಸರ್ಕಾರ ಪ್ರದರ್ಶನ ಮಾಡಿದೆ ಎನ್ನುವುದನ್ನು ಹೇಳಿದ್ದೇನೆ. ಮಾನ್ಯ ಸಚಿವರು ಯಾವ ಅಮಲಿನಲ್ಲಿ ಇದ್ದರೋ ಗೊತ್ತಾಗಲಿಲ್ಲ. ಇದ್ದಕ್ಕಿದ್ದ ಹಾಗೆ ಎದ್ದು XXX ಎಂದು ಹೇಳಿದ್ದಾರೆ. ಅವರು ಆ ಮಾತನ್ನು ವಾಪಸ್ಸು ತೆಗೆದುಕೊಂಡು ಅದಕ್ಕೆ ಕ್ಷಮಾಪಣೆ ಕೇಳುವವರೆಗೂ ಧರಣಿ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮಂತ್ರಿಗಳು ನೀಡಿದ ಬೇಜವಾಬ್ದಾರಿ ಹೇಳಿಕೆಯನ್ನು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ.

2.00 ಪಿ ಎಂ

ಮಾನ್ಯ ಮುಖ್ಯಮಂತ್ರಿಯವರು ಇವರನ್ನು ಮಂತ್ರಿ ಪದವಿಯಿಂದ ತೆಗೆಯಬೇಕಾಗುತ್ತದೆ, ಇವರು ಏನು ತಿಳಿದುಕೊಂಡಿದ್ದಾರೆ, ಇವರು ಮಂತ್ರಿಯಾಗಿ ಕೆಲಸ ಮಾಡುತ್ತಿದ್ದಾರೆಯೇ ಅಥವಾ ಏನು ಮಾಡುತ್ತಿದ್ದಾರೆ. ತಾವು ಆ ಪದವನ್ನು ತೆಗೆದುಕೊಳ್ಳಬೇಕಾಗುತ್ತದೆ, XXX ಪದವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು.

– ಗೊಂದಲ –

(ಬಿ.ಜೆ.ಪಿ. ಸದಸ್ಯರುಗಳು ಸದನದ ಬಾವಿಗೆ ಬಂದರು)

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಉಪಾಧ್ಯಕ್ಷರೇ, ಅವರು ಅವರ ಪಕ್ಷದ, ಅವರ ಸಿದ್ಧಾಂತ, ಅವರ ಗುಂಪಿನಿಂದ, ಏನಾದರೂ ನಿಲುವನ್ನು ತೆಗೆದುಕೊಳ್ಳಲಿ, ಅವರು, ಪಕ್ಕದ ರಾಷ್ಟ್ರದ ಮಗುವಿಗೆ ಬೆಂಬಲ ಕೊಟ್ಟಂತಹ ರಾಷ್ಟ್ರವನ್ನು XXX ಎಂದು ಹೇಳಿದ್ದಾರೆ. ಈ ರೀತಿ ಭಾರತ ಸರ್ಕಾರ ಏನಾದರೂ ಘೋಷಣೆ ಮಾಡಿದ್ದರೆ, ನಾವು ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇವೆ. ಮೊದಲು XXX ಎಂದು ಪಾಕಿಸ್ತಾನವನ್ನು ಭಾರತ ಸರ್ಕಾರ ಏನಾದರೂ ಘೋಷಣೆ ಮಾಡಿದೆಯೇ? ಅದನ್ನು ತೀರ್ಮಾನ ಮೊದಲು ಮಾಡಲಿ, ಅನಂತರ ಕ್ಷಮಾಪಣೆ, ಮತ್ತೊಂದು ಬೇರೆ ವಿಚಾರ.

ಶ್ರೀ ಜಗದೀಶ್ ಶೆಟ್ಟರ್ : XXX ಎನ್ನುವ ಪದ ಪ್ರಯೋಗವನ್ನು ಏಕೆ ಮಾಡಿದರು? ಅದನ್ನು ಅವರು ಹೇಳಲಿ, ಒಬ್ಬ ಶಾಸಕರಿಗೆ XXX ಎನ್ನುವ ಪದ ಪ್ರಯೋಗವನ್ನು ಮಾಡಿದ್ದಾರಲ್ಲಾ, ಅದು ಮೊದಲು ನಿರ್ಧಾರವಾಗಲಿ, ಯಾರ್ಯಾರು XXX ಎಂಬುದು ನಿರ್ಧಾರವಾಗಿ ಬಿಡಲಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷರೇ, ನಾವು ಏನಾದರೂ ಹೇಳುವುದಕ್ಕೆ ಅವಕಾಶ ಇದೆಯೇ?

XXX ಈ ಪದಗಳನ್ನು ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.